ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ, ನ್ಯಾಕ್‌ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440 ಚಾಮರಾಜನಗರ ಜಿಲ್ಲೆ**

☎: 08224-252149 jsscwk@gmail.com www. jsscwkgl.org

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಾಗತ ಸಮಾರಂಭ**

ಕೊಳ್ಳೇಗಾಲ – 20.8.2025 ವಿದ್ಯಾರ್ಥಿಗಳೊಡನೆ ಹೆಚ್ಚು ಸಮಯವನ್ನು ಕಳೆಯುವ ಭೋಧಕರು ವಿದ್ಯಾರ್ಥಿಗಳಿಗೆ ಸೂಕ್ತ ಪ್ರೇರಣೆ ಹಾಗೂ ಮಾರ್ಗದರ್ಶನ ನೀಡಿ ಅವರ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಬೇಕಿದೆ ಎಂದು ಐಕ್ಯೂಐಸಿ ಸಂಚಾಲಕರು ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್.ಮಮತ, ಕೊಳ್ಳೇಗಾಲ ಇವರು ಹೇಳಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪದವಿ ವಿಭಾಗದ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ **"ಸ್ವಾಗತ ಸಮಾರಂಭ"** ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವುದು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವರನ್ನು ಉತ್ತಮರನ್ನಾಗಿಸುವುದು ಕರ್ತವ್ಯವಾಗಬೇಕು. ಕಾಲೇಜು ಹಂತದಲ್ಲಿ ಅವರಿಗೆ ಮಾರ್ಗದರ್ಶನ ನೀಡಿ ಅವಕಾಶ ನೀಡುವುದರ ಮೂಲಕ ಭವಿಷ್ಯ ರೂಪಿಸಬೇಕಿದೆ. ಮುಖ್ಯವಾಗಿ ಸ್ವರ್ಧಾತ್ಮಕ ಮನೋಭಾವ ಬೆಳೆಸಿ ಸ್ವರ್ಧಾತ್ಮಕ ಪ್ರಪಂಚದಲ್ಲಿ ಯಶಸ್ವಿಯನ್ನಾಗಿಸಬೇಕಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪ ಇವರು ಬದುಕಿನ ಸಾರ್ಥಕತೆಗೆ ಶಿಕ್ಷಣವಷ್ಟೇ ಸಾಲದು. ಜೀವನ ರೂಪಿಸಿಕೊಳ್ಳಲು ಅಗತ್ಯ ಕೌಶಲಗಳೂ ಬೇಕು. ಸ್ವಯಂ–ಪ್ರೇರಣೆ, ಸ್ವಯಂ–ಗೌರವ, ಆತ್ಮವಿಶ್ವಾಸ, ಪ್ರಾಮಾಣಿಕತೆ, ಆಶಾವಾದಿತ್ವ, ಜೀವನೋತ್ಸಾಹ ಮುಂತಾದ ನಿಲವುಗಳು ಮತ್ತು ಕೌಶಲಗಳು, ವೃತ್ತಿ ಮತ್ತು ವೈಯಕ್ತಿನ ಬದುಕಿನ ಯಶಸ್ವಿಗೆ ಕಾರಣವಾಗುತ್ತದೆ. ಪ್ರಸ್ತುತ ವಿದ್ಯಾರ್ಥಿಗಳು ಕೋರ್ಸ್ ಮೊದಲು ನಂತರ ವೃತ್ತಿ ಎಂಬ ಪದ್ಧತಿಯಲ್ಲಿದ್ದಾರೆ ಆದರೆ ಮೊದಲು ವೃತ್ತಿಯ ಆಯ್ಕೆ ನಂತರ ಕೋರ್ಸ್ ಆಯ್ಕೆ ಎಂದು ಬದಲಾಯಿಸಿಕೊಳ್ಳಬೇಕಿದೆ. ಇಂದು ಕೋರ್ಸ್ ಆಯ್ಕೆಗೂ ಮುನ್ನ ವೃತ್ತಿ ಯೋಜನೆ ಮಾಡಬೇಕಿದೆ. ಅಧ್ಯಾಪಕರ ಜವಾಬ್ದಾರಿ ಪಠ್ಯಕ್ರಮಕ್ಕೆ ಸೀಮಿತಗೊಳ್ಳದೆ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಮತ್ತು ಬದುಕಿಗೆ ದಾರಿದೀಪವಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಾಯಕ ಆಡಳಿತಾಧಿಕಾರಿಯಾದ ಶ್ರೀ ಹೆಚ್ ಬಿ ಗಿರೀಶ್ ಇವರು ಉಪಸ್ಥಿತರಿದ್ದರು.

**“ಸ್ವಾಗತ ಸಮಾರಂಭ”** ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವುದು ಚಿತ್ರದಲ್ಲಿ ಸಹಾಯಕ ಆಡಳತಾಧಿಕಾರಿಯಾದ ಶ್ರೀ ಹೆಚ್ ಬಿ ಗೀರಿಶ್  ಮತ್ತು ಐಕ್ಯೂಐಸಿ ಸಂಚಾಲಕರು ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್.ಮಮತ



ಪ್ರಾಚಾರ್ಯರಾದ ಡಾ ಹೆಚ್.ಎಸ್. ಕೊಂಗಳಪ್ಪರವರು ಅಧ್ಯಕ್ಷೀಯ ಭಾಷಣ ಮಾಡುತ್ತಿರುವುದು. ಶ್ರೀ ಹೆಚ್ ಬಿ ಗೀರಿಶ್  ಮತ್ತು ಐಕ್ಯೂಐಸಿ ಸಂಚಾಲಕರು ಹಾಗೂ ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್.ಮಮತ



ಕಾರ್ಯಕ್ರಮದಲ್ಲಿ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿರುವುದು.

